<u>ಎಸ್ ಸಿ ನಂ. **5022/2025**</u>

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿ ಡಬ್ಲೂಃ** 3

**ಪಿ ಡಬ್ಲೂಃ** 3

| | |
|---|---|
| ಸಾಕ್ಷಿಯ ಹೆಸರು - | ರಮೇಶ |
| ತಂದೆಯ ಹೆಸರು - | ಮೇತಾ ಘಂಟಯ್ಯ |
| ವಯಸ್ಸು - | 65 ವರ್ಷ |
| ಉದ್ಯೋಗ - | ರೈತ |
| ವಾಸಸ್ಥಳ - | ಕಮಲಾಪುರ |

<u>**ಸಾಕ್ಷಿಯನ್ನು ದಿನಾಂಕಃ** 24-12-2025 **ರಂದು ಪ್ರಾಮಾಣೀಕರಿಸಲಾಯಿತು.**</u>

<u>**ಮುಖ್ಯ ವಿಚಾರಣೆಃ ಮಾನ್ಯ ಪಿ. ಪಿ. ಅವರಿಂದ**</u>

ಆರೋಪಿ ನನಗೆ ಗೊತ್ತು. ಮೃತ ಅಭಿ ಚಾಸಾ **-1** ರವರ ಮಗ. **1** ವರ್ಷದ ಹಿಂದೆ ಮೃತ ಕಾಣೆಯಾಗಿದ್ದು ಈ ಬಗ್ಗೆ ಪೋಲಿಸರಲ್ಲಿ ದೂರು ನೀಡಿದ್ದಳು. **3** ದಿನಗಳ ನಂತರ ಆತನ ಶವ ಕುರೆಕೊಪ್ಪ ಕೆನಾಲ್ ಹತ್ತಿರ ಆತನ ಶವ ಸಿಕ್ಕಿತ್ತು. ಆತ ಹೇಗೆ ಸತ್ತ ಎಂದು ನನಗೆ ಗೊತ್ತಿಲ್ಲ. ನಿಪಿಃ **2** ಮಹಜರು ನಲ್ಲಿರುವ ಸಹಿ ನನ್ನದು. ಅದನ್ನು ನಿಪಿಃ **2 (**ಸಿ**)** ಎಂದು ಗುರುತಿಸಲಾಯಿತು. ಅದನ್ನು ಠಾಣೆಯಲ್ಲಿ ಮಾಡಿದ್ದೇನೆ. ಪೋಲಿಸರು ಪಂಚನಾಮೆ ಮಾಡಿ ಸದರಿ ಸಹಿ ಪಡೆದಿದ್ದರು. ನಿಪಿಃ **4** ರಂತೆ ಪೋಟೋ ತೆಗೆದಿದ್ದರು.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

<u>**ಪಾಟೀ ಸವಾಲುಃ ಮಾನ್ಯ ಪಿ ಪಿ ಅವರಿಂದ**</u>

ಆರೋಪಿ ಚಾಸಾ **-1** ರವರೊಂದಿಗೆ ಅಕ್ರಮ ಸಂಬಂಧ ಹೊಂದಿದ್ದು, ಮೃತ ಇದಕ್ಕೆ ಅಡ್ಡಿಯಾಗುತ್ತಾನೆ ಎಂದು ಆತನನ್ನು ಕೆನಾಲ್ ಗೆ ತಳ್ಳಿ ಕೊಲೆ ಮಾಡಿದ ಸಂಬಂಧ ಪೋಲಿಸರು ಘಟನಾ ಸ್ಥಳದಲ್ಲಿ ನಿಪಿಃ **2** ರಂತೆ ಮಹಜರು ಮಾಡಿ, ಅದಕ್ಕೆ ನಾನು ಪಂಚನಾಗಿ ಸಹಿ

ಮಾಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ವಾಯ್., ವಕೀಲರಿಂದ – ಇಲ್ಲಾ.**

ಮರು ವಿಚಾರಣೆಃ ಇಲ್ಲಾ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ವಿಜಯನಗರ ಜಿಲ್ಲೆ, ಹೊಸಪೇಟೆ.